ಜಾಕೋಬ್ ಡಿಸೋಜ, ಕುರುವಳ್ಳಿ
*ಕಷ್ಟ ಅಂದ್ಮೇಲೆ ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತಾ ಅಂತಾರಲ್ಲಾ, ಮರಕ್ಕೆ ಕಷ್ಟ ಬರೋದೇ ಇಲ್ವಾ?*



ಪಾಪ! ರುಕ್ಷ ಮನಸ್ಸಿಗೆ ವೃಕ್ಷದ ತೊಂದರೆ ಹೇಗೆ ತಿಳಿದೀತು ಬಿಡಿ.

ಆರ್. ಮಧುಸೂದನ್, ಹಾಸನ
*ಗಾಂಧೀಜಿಗೆ ಗುಂಡಿನ ಏಟು ಬಿದ್ದಾಗ ಅಮ್ಮಾ... ಅಂತ ನರಳದೆ ಹೇ ರಾಮ್ ಅಂದಿದ್ದೇಕೆ?*
ಆ ಗುಂಡು ಬಿದ್ದಾಗಲೇ ಮುಂದೆ ಅಯೋಧ್ಯೆಯ ಗಲಾಟೆ ಆಗುವುದು ಅವರಿಗೆ ಕಂಡಿತಂತೆ!

ಎಚ್.ಆರ್.ದೇಸಾಯಿ, ರಾಯಚೂರು
*ಒಬ್ಬ ಮಣ್ಣಿನ ಮಗ, ಇನ್ನೊಬ್ಬ ರೈತನ ಮಗ. ಈ ರಾಜಕಾರಣಿಗಳು ಭಾರತಮಾತೆಯ ಮಕ್ಕಳು ಎಂದೇಕೆ ಹೇಳಿಕೊಳ್ಳುವುದಿಲ್ಲ?*
ಹಾಗೆ ಹೇಳಿಕೊಂಡರೆ ರೈತನ ಓಟೂ ಸಿಗಲ್ಲ, ಮಣ್ಣೂ ಸಿಗಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು
*ಜಗತ್ತಿನ ಎಲ್ಲಾ ಗಂಡಂದಿರೂ ಹೆಂಡತಿಯ ಗುಲಾಮರಂತೆ. ಹೂಂ ಅಂತೀರಾ, ಊಹೂಂ ಅಂತೀರಾ?*
ಸ್ವಲ್ಪ ಇರಿ, ಹೆಂಡತಿಯನ್ನು ಕೇಳಿ ಹೇಳಿಬಿಡುತ್ತೇನೆ.

ಕೃಷ್ಣಪ್ರಸಾದ್, ರಾಜಾಜಿನಗರ
*ಸರಿಯಾಗಿ ಉತ್ತರ ಸಿಗದಿದ್ದರೆ ನೀವು ಅಡಿಗೆಮನೆ ನೋಡುತ್ತೀರಂತೆ ಹೌದಾ ರಾಂ?*



ನಿಜ. ಕುರುಕಲು ತಿಂಡಿ, ಕಾಫಿ ಇರ್ದೊಡೆ ಉತ್ತರಕ್ಕೆ ಪೆನ್ನು ಹಚ್ಚೆಂದ ಸರ್ವಜ್ಞ!

ಅಭಿಷೇಕ್ ಆರ್. ರೆಡ್ಡಿ, ಗೌರಿಬಿದನೂರು
*ಕನಸುಗಳು ಬ್ಲಾಕ್ ಅಂಡ್ ವೈಟ್‌ನಲ್ಲಿ ಬರುತ್ತವೋ ಅಥವಾ ಕಲರ್‌ನಲ್ಲಿ ಬರುತ್ತವೋ?*
ಹುಡುಗಿಯರ ಬಗ್ಗೆ ಆದರೆ ರಂಗುರಂಗು, ಹಣದ ಬಗ್ಗೆ ಆದರೆ ಬ್ಲಾಕ್ ಎಂಡ್ ವೈಟ್!

ಡಿ. ದೊಡ್ಡಲಿಂಗೇಗೌಡ, ಮಳವಳ್ಳಿ
*ಧರ್ಮಗುರುಗಳು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಹೇಗಿರುತ್ತದೆ?*
ಪ್ರಜಾಪ್ರಭುತ್ವದ ತಲೆ ಬೋಳಿಸಿದಂತೆ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಎಲ್ಲಾ ಜನರೂ ಎ.ಸಿ. ರೂಂನಲ್ಲಿ ಕುಳಿತು ಮಾಡುವಂತಹ ಕೆಲಸವನ್ನೇ ಕೇಳಿದರೆ ನಮ್ಮಂತೆ ಕಷ್ಟಪಟ್ಟು ಏಣಿ ಏರಿ ಪೇಂಟ್ ಮಾಡುವವರು ಯಾರು?*
ಇದ್ದೇ ಇರುತ್ತಾರೆ ಪಾಪಣ್ಣ, ಬಣ್ಣದ ಕನಸುಗಳು ಕುಸಿದಾಗ ಬಣ್ಣದ ಡಬ್ಬವೇ ಗಟ್ಟಿ!

ಡಿ.ಕೆ. ರಾಜ್, ಗದಗ
***I, Love, U** ಈ ಪದಗಳಿಗೆ ಇರುವ ಬೆಲೆ ಬೇರೆ ಯಾವ ಪದಕ್ಕೂ ಇಲ್ಲವಲ್ಲಾ...?*
Live and Let Live ಎನ್ನುವುದು ಇದಕ್ಕಿಂತಲೂ ಬೆಲೆ ಬಾಳುವುದು; ಮರುಳರಿಗೆ ತಿಳಿಯದಷ್ಟೆ.

ಪಟ್ಟಾಂಗದ ಪಟ್ಟಾಭಿ, ಬೆಂಗಳೂರು
*ರಾಜಕಾರಣ ಎನ್ನುವುದು ಬರೀ ಭೂಲೋಕಕ್ಕೆ ಸೀಮಿತವೋ ಅಥವಾ ಮುಕ್ಕೋಟಿ ದೇವತೆಗಳಿರುವ ಸ್ವರ್ಗದಲ್ಲೂ ಉಂಟೋ?*
ಅಲ್ಲೂ ಕಾಂಗ್ರೆಸ್ ರೀತಿಯ ಆಡಳಿತವೇ... ಇಂದ್ರ ಪ್ರಧಾನಿ, ಶಿವ– ವಿಷ್ಣುವಿನ ದ್ವಿಪಾತ್ರದಲ್ಲಿ ಹೈಕಮಾಂಡ್!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಣ್ಣು ಕನ್ನಡಿಗೆ ಕೊಡುವ ಬೆಲೆಯನ್ನು ಗಂಡನಿಗೆ ಕೊಡುವುದಿಲ್ಲ, ಏಕೆ?*
ಸರಿಯೇ. ಗಂಡ ಕೋಪ, ತಾಪ ತೋರಿಸುತ್ತಾನೆ, ಕನ್ನಡಿ ರೂಪ ತೋರಿಸುತ್ತದೆ.

ಬಿ.ಎಸ್. ಮಳ್ಳೂರ, ಹಲಗತ್ತಿ
*ಎಲ್ಲರಿಗೂ ಉತ್ತರ ಕೊಡುವ ನಿಮ್ಮ ಮೆದುಳಿಗೆ ಬೆಲೆ ಎಷ್ಟು?*
ಇರುಳಲ್ಲಿ ಬೆಳಕು ಕೊಡುವ ಚಂದ್ರನ ಬೆಳಕಿನ ಬೆಲೆಯಷ್ಟು!

ಅನಂತಪದ್ಮನಾಭ ಹೆಚ್.ಎಂ, ಮೈಸೂರು
*ನನ್ನ ಸ್ನೇಹಿತನೊಬ್ಬ ನನ್ನ ಹೆಂಡತಿ ಚೆನ್ನಾಗಿದ್ದಾಳಾ? ಎಂದು ಕೇಳುತ್ತಿದ್ದಾನೆ. ಏನೆಂದು ಉತ್ತರಿಸಲಿ?*
ಚೆನ್ನಾಗಿರುವುದಷ್ಟೇ ಅಲ್ಲ, ಒಳ್ಳೆಯವಳೂ ಸಹ ಎನ್ನಿ; ಅವನ ಹೆಂಡತಿ ನಿಮಗೆ ತಂಗಿಯಲ್ಲವೇ!

ಎಸ್.ವಿ.ಶ್ರೀನಿವಾಸ್, ಚಿಕ್ಕಮಗಳೂರು

## ಬಹುಮಾನಿತ ಪ್ರಶ್ನೆ

ಡಿ.ಎಸ್. ಪಂಕಜ ಸುಬ್ರಮಣ್ಯ, ಬೆಂಗಳೂರು
*32– 33 ವರ್ಷದ ಮಕ್ಕಳಿದ್ದರೂ ತಾಯಿಯ ವಯಸ್ಸು 40 ದಾಟುವುದಿಲ್ಲವಲ್ಲಾ...?*
40ರ ನಂತರ ಹೆಣ್ಣು ಹೇಳುವುದು ದೇಹದ ವಯಸ್ಸನ್ನಲ್ಲ, ಮನಸ್ಸಿನ ವಯಸ್ಸನ್ನು!

*ಪ್ರಸಿದ್ಧ ನಟಿಯರು ಎರಡು ಮೂರು ಮದುವೆ ಆದವರನ್ನೇ ಮದುವೆ ಆಗುತ್ತಾರಲ್ಲಾ, ಏಕೆ?*
ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಇವರು ತಮ್ಮ ಷೂಟಿಂಗ್ ಇತ್ಯಾದಿ ಮುಗಿಸಲು ಆಕ್ಷೇಪಣೆ ಇರುವುದಿಲ್ಲವೆಂದು.

ಸಂದೀಪ್ ಪಿ, ಪುತ್ತೂರು
*ಮನೆ ಕಟ್ಟಿನೋಡು, ಮದುವೆ ಆಗಿ ನೋಡು ಅಂತಾರೆ; ಮನೆ ಸರಿಯಿಲ್ಲವಾದ್ರೆ ಬೇರೆ ಕಟ್ಟಿಸಬಹುದು, ಹೆಂಡ್ತಿ ಸರಿಯಿಲ್ಲವಾದ್ರೆ?*
ಡೈವೋರ್ಸ್ ಬಹಳ ದುಬಾರಿ; ನಡೆಯಿರಿ, ಬಿಡದಿ ಆಶ್ರಮ ಖಾಲಿ ಇದೆ, ಮಠಾಧೀಶರಾಗಿಬಿಡಿ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಹನುಮಂತನ ದೇವಸ್ಥಾನಕ್ಕೆ ಮಹಿಳೆಯರೇ ಹೆಚ್ಚಾಗಿ ಹೋಗಲು ಕಾರಣ...?*



ರಾಮನಂತಹವನನ್ನು ಹುಡುಕಿ ಕೊಡು ಎಂದು ಕೇಳಲು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಚೊಚ್ಚಲ ಹೆರಿಗೆ ತವರುಮನೆಯಲ್ಲೇ ಆಗಬೇಕಂತೆ, ಕಾರಣವೇನು?*
ಮಗು ರಂಪ ಮಾಡಿದರೆ ಅತ್ತೆ, ಇನ್ನೂ ರಂಪ ಮಾಡಿಯಾಳೆಂಬ ಭಯದಿಂದ!

ಎಸ್. ಶ್ರೀಧರ್, ಬೆಂಗಳೂರು
*ಸಮಸ್ಯೆಗಳನ್ನು ಕಂಡ ಸ್ನೇಹಿತರು ಸಮಯಕ್ಕೆ ಸ್ಪಂದಿಸದೆ ಇದ್ದರೆ ಅವರನ್ನು ಏನೆಂದು ಕರೆಯಬಹುದು?*
ಬಳಗ!

ವಿ. ಹಮೀದ್, ವಿಟ್ಲ
*ಸಿಟ್ಟನ್ನು ನಿಯಂತ್ರಣದಲ್ಲಿಡಲು ಏನು ಮಾಡಬೇಕು?*
ನಿಮಗಿಂತ ಸಿಟ್ಟು, ರೋಷ, ಹಣ, ಬಲ ಇರುವವರನ್ನು ಮದುವೆಯಾಗಿಬಿಡಿ!

■ ರಾಮ್